ಎ-72-06

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರು ನಿಯಮ 72ರಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ವಿಷಯ :**

ಬೆಳಗಾವಿ ಜಿಲ್ಲೆ ಕಿತ್ತೂರು ತಾಲ್ಲೂಕಿನ ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ಸೈನಿಕ ವಸತಿ ಶಾಲೆಯಲ್ಲಿ, ವಿದ್ಯಾರ್ಥಿನಿಯರು ವಾಸಿಸುತ್ತಿದ್ದ 02 ವಸತಿ ನಿಲಯಗಳು ಕುಸಿದುಬಿದ್ದ ಕಾರಣ 600 ವಿದ್ಯಾರ್ಥಿನಿಯರ ವಸತಿ ನಿಲಯಗಳ ಅಸ್ತವ್ಯಸ್ತವಾಗಿರುವ ವಿಷಯದ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ಬೆಳಗಾವಿ ಜಿಲ್ಲೆ ಕಿತ್ತೂರು ತಾಲ್ಲೂಕಿನ ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ಸೈನಿಕ ವಸತಿ ಶಾಲೆಯಲ್ಲಿ, 02 ವಸತಿ ನಿಲಯಗಳು ಕುಸಿದುಬಿದ್ದಿರುವ ಬಗ್ಗೆ ಗಮನಕ್ಕೆ ಬಂದಿರುತ್ತದೆ. ಸದರಿ ಶಾಲೆಯು ಖಾಸಗಿ ಶಾಲೆಯಾಗಿದ್ದು, ಸರ್ಕಾರದಿಂದ ವಾರ್ಷಿಕವಾಗಿ ಒಟ್ಟಾರೆ ಸಹಾಯಾನುದಾನವನ್ನು ನೀಡುತ್ತಿದ್ದು, ಶಾಲೆಯ ಅಭಿವೃದ್ಧಿ ಮತ್ತು ಇತರೆ ವೆಚ್ಚಗಳಿಗಾಗಿ 2020-21ನೇ ಸಾಲಿನ ಆಯವ್ಯಯದ ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿ ಒಟ್ಟು ರೂ.503.00 ಲಕ್ಷಗಳನ್ನು ಒದಗಿಸಲಾಗಿರುತ್ತದೆ.

ರೂ.ಲಕ್ಷಗಳಲ್ಲಿ

| | |
|---|---|
| ಲೆಕ್ಕ ಶೀರ್ಷಿಕೆ: 2202-02-110-3-03-102 (ಸಹಾಯಾನುದಾನ-ಆಸ್ತಿಗಳ ಸೃಜನೆ) | 100.00 |
| ಲೆಕ್ಕ ಶೀರ್ಷಿಕೆ: 2202-110-3-03-103 (ಸಹಾಯಾನುದಾನ-ಸಾಮಾನ್ಯ) | 150.00 |
| ಲೆಕ್ಕ ಶೀರ್ಷಿಕೆ: 2202-110-3-03-117 (ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ) | 253.00 |
| ಒಟ್ಟು | **503.00** |

ಮುಂದುವರೆದು, ಸದರಿ ಸೈನಿಕ ಶಾಲೆಯ ಕೋರಿಕೆಯ ಮೇರೆಗೆ 2020-21ನೇ ಸಾಲಿನ ಪೂರಕ ಅಂದಾಜುಗಳು-2ರಲ್ಲಿ ಹೆಚ್ಚುವರಿಯಾಗಿ ರೂ.200.00 ಲಕ್ಷಗಳನ್ನು ಒದಗಿಸಲು ಕ್ರಮವಹಿಸಲಾಗಿರುತ್ತದೆ.

ಒಟ್ಟಾರೆ ಸದರಿ ಶಾಲೆಗೆ 2020-21ನೇ ಸಾಲಿನಲ್ಲಿ **ರೂ.703.00** ಲಕ್ಷಗಳನ್ನು ಒದಗಿಸಲಾಗಿರುತ್ತದೆ.

**ಸಂಖ್ಯೆ : ಇಪಿ 153 ಯೋಯೋಕ 2020**

(ಎಸ್.ಸುರೇಶ್ ಕುಮಾರ್)
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು**